(5)

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:**-ಶ್ರೀ ಶಿವರಾಜು, ಪ್ರಥಮ ದರ್ಜೆ ಸಹಾಯಕ ಇವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿ ಘೋಷಿಸುವ ಬಗ್ಗೆ.

**ಓದಲಾಗಿದೆ:-**

ಕೃಷಿ ಆಯುಕ್ತರ ಕಾರ್ಯಾಲಯದ ಪತ್ರ ಸಂಖ್ಯೆ:ಸಿಬ್ಬಂದಿ-2/ಲಿಪಿಕ/ವಿವ77/2013-14, ದಿನಾಂಕ:11-04-2014 ಮತ್ತು 25-11-2014.

**ಪ್ರಸ್ತಾವನೆ:-**

ಶ್ರೀ ಶಿವರಾಜು, ಪ್ರಥಮ ದರ್ಜೆ ಸಹಾಯಕರು, ಇವರು ಅನುಕಂಪದ ಆಧಾರದ ಮೇರೆಗೆ ನೇಮಕಗೊಂಡು ಸಹಾಯಕ ಕೃಷಿ ನಿರ್ದೇಶಕರು, ಸುರಪುರ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ದಿನಾಂಕ:01-12-2008 ರಂದು ಕರ್ತವ್ಯಕ್ಕೆ ಹಾಜರಾದ ಇವರು ದಿನಾಂಕ:1-12-2008 ರಿಂದ ದಿನಾಂಕ:30-11-2010ರವರೆಗೆ ಪರಿವೀಕ್ಷಣಾ ಅವಧಿಯಲ್ಲಿದ್ದರು, ಆದರೆ ನಿಗದಿತ ಅವಧಿಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಕಾರಣ ಪರಿವೀಕ್ಷಣಾ ಅವಧಿ ಘೋಷಣೆ ಆಗಿರುವುದಿಲ್ಲ. ಸದರಿ ನೌಕರರು 2012ರ 2ನೇ ಅಧೀವೇಶನದಲ್ಲಿ ಬಾಕಿ ಇದ್ದ ಇಲಾಖಾ ಪರೀಕ್ಷೆಯಾದ ಕಿರಿಯ ಲೆಕ್ಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಸದರಿ ಪರೀಕ್ಷೆಯ ಫಲಿತಾಂಶವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:30-05-2013 ರಂದು ಪ್ರಕಟಗೊಂಡಿರುತ್ತದೆ.

ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣೆ) ನಿಯಮಗಳ ನಿಯಮ 4 (ii) ರ ಅನ್ವಯ ಇಲಾಖಾ ಮುಖ್ಯಸ್ಥರಾದ ಕೃಷಿ ನಿರ್ದೇಶಕರು ದಿನಾಂಕ:01-12-2008 ರಿಂದ 30-11-2010 ರವರೆಗಿನ ಪರಿವೀಕ್ಷಣಾ ಅವಧಿಯನ್ನು ಮತ್ತೊಂದು ವರ್ಷದವರೆವಿಗೂ ಇಲಾಖಾ ವ್ಯಾಪ್ತಿಯಲ್ಲಿ ದಿನಾಂಕ:30-11-2011ರವರೆಗೆ ವಿಸ್ತರಿಸಿ ದಿನಾಂಕ:30-08-2014ರಂದು ಆದೇಶ ಹೊರಡಿಸಿರುತ್ತಾರೆ. ಸದರಿ ನೌಕರರು ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ಅಸಾಧಾರಣಾ ರಜೆಯನ್ನು ಪಡೆದಿರುವುದಿಲ್ಲ. ಸದರಿಯವರಿಗೆ ದಿನಾಂಕ:01-12-2011 ರಿಂದ ದಿನಾಂಕ:30-05-2013 ರವರೆಗೆ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿ ಘೋಷಿಸಲು ಮೇಲೆ ಓದಲಾದ ಪತ್ರಗಳಲ್ಲಿ ಕೃಷಿ ಆಯುಕ್ತರು ಕೋರಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶ್ರೀ ಶಿವರಾಜು, ಪ್ರಥಮ ದರ್ಜೆ ಸಹಾಯಕ ಇವರು ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವುದರಿಂದ ಇವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸಿ ಆದೇಶಿಸಲು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ 20 ಕೃವಸೆ 2014, ಬೆಂಗಳೂರು, ದಿನಾಂಕ:12-02-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 4(1) (i) ರನ್ವಯ ಶ್ರೀ ಶಿವರಾಜು, ಪ್ರಥಮ ದರ್ಜೆ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಸುರಪುರ ಇವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ:01-12-2011 ರಿಂದ ದಿನಾಂಕ:30-05-2013ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ(ಸೇವೆಗಳು ಮತ್ತು ಸಮನ್ವಯ).

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು. (ಸೇವಾ ಪುಸ್ತಕ ಹಾಗೂ ದಿನಾಂಕ:25/11/2014ರ ಪತ್ರದೊಂದಿಗೆ ಕಳುಹಿಸಲಾದ ಎಲ್ಲಾ ಮೂಲ ದಾಖಲೆಗಳೊಂದಿಗೆ)
3) ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ.
4) ಸಂಬಂಧಪಟ್ಟ ನೌಕರರಿಗೆ (ಕೃಷಿ ಆಯುಕ್ತರ ಮುಖಾಂತರ)
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.